C.R.

# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1548
ಸದಸ್ಯರ ಹೆಸರು : ಶ್ರೀ ಮಧು ಜಿ.ಮಾದೇಗೌಡ (ಪದವೀಧರರ ಕ್ಷೇತ್ರ)
ಉತ್ತರಿಸುವ ದಿನಾಂಕ : 21-03-2025
ಉತ್ತರಿಸುವ ಸಚಿವರು : ಕೃಷಿ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಮಂಡ್ಯ ಜಿಲ್ಲೆಯಲ್ಲಿ ಭತ್ತದ ನಾಟಿಗೆ ಮತ್ತು ಕಬ್ಬು ಕಟಾವಿಗೆ ಕೃಷಿ ಕಾರ್ಮಿಕರ ಸಮಸ್ಯೆಯಿರುವುದರಿಂದ ಇದಕ್ಕೆ ಪರ್ಯಾಯವಾಗಿ ಯಾಂತ್ರೀಕೃತ ಭತ್ತದ ನಾಟಿ ಮತ್ತು ಕಬ್ಬು ಕಟಾವು ಪ್ರೋತ್ಸಾಹಿಸಲು ಕೃಷಿ ಇಲಾಖೆ ಕೈಗೊಂಡ ಕ್ರಮಗಳೇನು; | ಮಂಡ್ಯ ಜಿಲ್ಲೆಯಲ್ಲಿ ಭತ್ತದ ನಾಟಿಗೆ ಮತ್ತು ಕಬ್ಬು ಕಟಾವಿಗೆ ಕೂಲಿ ಕಾರ್ಮಿಕರ ಸಮಸ್ಯೆಯಿರುವುದರಿಂದ ಪರ್ಯಾಯವಾಗಿ ಯಾಂತ್ರೀಕೃತ ಭತ್ತದ ನಾಟಿ ಮತ್ತು ಕಬ್ಬು ಕಟಾವು ಪ್ರೋತ್ಸಾಹಿಸಲು ಕೃಷಿ ಇಲಾಖೆವತಿಯಿಂದ ಕೆಳಕಂಡಂತೆ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ.<br><br>ಅ) ಕೃಷಿ ಯಾಂತ್ರೀಕರಣ ಯೋಜನೆಗಳಡಿ ಭತ್ತದ ನಾಟಿ ಯಂತ್ರಗಳಿಗೆ ಗರಿಷ್ಠ 1.00 ಲಕ್ಷ ಸಹಾಯಧನ ಒದಗಿಸಲಾಗುತ್ತಿದೆ.<br><br>ಆ) ಹೈಟೆಕ್ ಹಾರ್ವೆಸ್ಟರ್ ಹಬ್ ಯೋಜನೆಯಡಿ ಕಬ್ಬು ಕಟಾವು ಯಂತ್ರಗಳಿಗೆ ಸಾಮಾನ್ಯ ವರ್ಗದ ರೈತರಿಗೆ ಶೇ.40 ಗರಿಷ್ಟ ರೂ.40.00 ಲಕ್ಷ ಮತ್ತು ಸಂಘ-ಸಂಸ್ಥೆ/ಪ.ಜಾತಿ/ಪ.ಪಂಗಡದ ರೈತರಿಗೆ ಶೇ: 50 ಗರಿಷ್ಟ ರೂ.50.00 ಲಕ್ಷ ರವರೆಗೆ ಸಹಾಯಧನ ಒದಗಿಸಲಾಗುತ್ತಿದೆ. |
| ಆ) | ಯಾಂತ್ರೀಕೃತ ಭತ್ತದ ನಾಟಿಗೆ ನೋಂದಣಿ ಮಾಡಿಸಿದ ರೈತರ ಸಂಖ್ಯೆ ಎಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು) | 432 ರೈತರು ಯಾಂತ್ರೀಕೃತ ಭತ್ತದ ನಾಟಿಗೆ ( ಕೃಷಿ ಯಂತ್ರಧಾರೆ ಕೇಂದ್ರ) ಇಲಾಖೆ ಮತ್ತು ಖಾಸಗಿ ಸಂಸ್ಥೆಯಲ್ಲಿ ನೋಂದಣಿ ಮಾಡಿಸಿರುತ್ತಾರೆ. ತಾಲ್ಲೂಕುವಾರು ಮಾಹಿತಿ ಕೆಳಕಂಡಂತಿದೆ. |

| ತಾಲ್ಲೂಕು | ರೈತರ ಸಂಖ್ಯೆ |
|---|---|
| ಮಂಡ್ಯ | 200 |
| ಮದ್ದೂರು | 94 |
| ಮಳವಳ್ಳಿ | 12 |
| ಶ್ರೀರಂಗಪಟ್ಟಣ | 49 |
| ಪಾಂಡವಪುರ | 35 |
| ಕೆ.ಆರ್‌ಪೇಟೆ | 42 |
| ನಾಗಮಂಗಲ | 0 |
| **ಒಟ್ಟು** | **432** |

<table>
<tr>
<td>ಇ)</td>
<td>ಯಾಂತ್ರೀಕೃತ ಭತ್ತದ ನಾಟಿಯನ್ನು ಎಷ್ಟು ಪ್ರದೇಶದಲ್ಲಿ ಕೈಗೊಳ್ಳಲಾಗಿದೆ. ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳ ವತಿಯಿಂದ ಎಷ್ಟು ರೈತರಿಗೆ ಯಾಂತ್ರೀಕೃತದ ಮೂಲಕ ಭತ್ತದ ನಾಟಿ ಮಾಡಿಸಿ ಕೊಡಲಾಗಿದೆ; (ತಾಲ್ಲೂಕುವಾರು ಮಾಹಿತಿ ನೀಡುವುದು)</td>
<td>ಯಾಂತ್ರೀಕೃತ ಭತ್ತದ ನಾಟಿಯನ್ನು 226.40ಹೆಕ್ಟೇರ್ ಪ್ರದೇಶದಲ್ಲಿ ಕೈಗೊಳ್ಳಲಾಗಿದೆ. ಸರ್ಕಾರ (ಕೃಷಿ ಯಂತ್ರಧಾರೆ ಕೇಂದ್ರ) ಮತ್ತು ಸರ್ಕಾರೇತರ ಸಂಸ್ಥೆಗಳ ವತಿಯಿಂದ ಒಟ್ಟು 428 ರೈತರಿಗೆ ಯಾಂತ್ರೀಕೃತ ಭತ್ತದ ನಾಟಿ ಮಾಡಿಸಿಕೊಡಲಾಗಿದೆ. ತಾಲ್ಲೂಕುವಾರು ಮಾಹಿತಿ ಕೆಳಕಂಡಂತಿದೆ.
<table>
<tr><th>ತಾಲ್ಲೂಕು</th><th>ಪ್ರದೇಶ (ಹೆ)</th><th>ರೈತರ ಸಂಖ್ಯೆ</th></tr>
<tr><td>ಮಂಡ್ಯ</td><td>80.00</td><td>200</td></tr>
<tr><td>ಮದ್ದೂರು</td><td>50.40</td><td>94</td></tr>
<tr><td>ಮಳವಳ್ಳಿ</td><td>12.00</td><td>8</td></tr>
<tr><td>ಶ್ರೀರಂಗಪಟ್ಟಣ</td><td>42.00</td><td>49</td></tr>
<tr><td>ಪಾಂಡವಪುರ</td><td>22.00</td><td>35</td></tr>
<tr><td>ಕೆ.ಆರ್‌ಪೇಟೆ</td><td>20.00</td><td>42</td></tr>
<tr><td>ನಾಗಮಂಗಲ</td><td>0</td><td>0</td></tr>
<tr><td>ಒಟ್ಟು</td><td>226.40</td><td>428</td></tr>
</table>
</td>
</tr>
<tr>
<td>ಈ)</td>
<td>ಪ್ರತಿ ಎಕರೆ ಅಥವಾ ಒಂದು ತಾಸು ಭತ್ತದ ನಾಟಿಗೆ ರೈತರು ಭರಿಸಬೇಕಾದ ವೆಚ್ಚವೆಷ್ಟು;</td>
<td>ರೈತರು ಪ್ರತಿ ಎಕರೆ ಭತ್ತವನ್ನು ಕೂಲಿ ಆಳುಗಳ ಮೂಲಕ ನಾಟಿಗೆ ರೂ. 4000.00-4500.00 ಹಾಗೂ ಯಾಂತ್ರೀಕೃತ ಭತ್ತದ ನಾಟಿಗೆ ರೂ.2500.00-3000.00 ವೆಚ್ಚ ಭರಿಸುತ್ತಿದ್ದಾರೆ.</td>
</tr>
<tr>
<td>ಉ)</td>
<td>ಯಾಂತ್ರೀಕೃತ ಕಬ್ಬು ಕಟಾವಿಗೆ ರೈತರು ಆಸಕ್ತಿ ತೋರುತ್ತಿದ್ದಾರೆಯೆ; ಸಬ್ಸಿಡಿಯಲ್ಲಿ ಎಷ್ಟು ಯಂತ್ರ ಖರೀದಿಸಿದ್ದಾರೆ.(ವಿವರ ನೀಡುವುದು)</td>
<td>ಯಾಂತ್ರೀಕೃತ ಕಬ್ಬು ಕಟಾವಿಗೆ ರೈತರು ಆಸಕ್ತಿ ತೋರುತ್ತಿದ್ದಾರೆ. ಆದರೆ, ಕಬ್ಬು ಕಟಾವು ಯಂತ್ರಕ್ಕೆ ಅಗತ್ಯವಿರುವ 4-5 ಅಡಿ ಅಂತರದ ಸಾಲಿನ ಬೇಸಾಯಕ್ಕೆ ರೈತರು ಆಸಕ್ತಿ ತೋರುತ್ತಿಲ್ಲವಾದುದರಿಂದ, ನಿರೀಕ್ಷಿತಾ ಪ್ರಮಾಣದಲ್ಲಿ ಕಬ್ಬು ಕಟಾವು ಯಂತ್ರಕ್ಕೆ ಕಟಾವು ಕ್ಷೇತ್ರ ಸಿಗುತ್ತಿರುವುದಿಲ್ಲ.<br><br>ಹೈಟೆಕ್ ಹಾರ್ವೆಸ್ಟರ್ ಹಬ್ ಯೋಜನೆಯಡಿ ಒರ್ವ ರೈತರು ಕಬ್ಬು ಕಟಾವು ಯಂತ್ರ ಖರೀದಿಸಿದ್ದಾರೆ.<br><br>ಫಲಾನುಭವಿಯ ಹೆಸರು: ಶ್ರೀಮತಿ ಬಿ.ಎನ್.ಜ್ಯೋತಿ ಕೋಂ ಕೆ. ಶಂಕರ, ಕೊತ್ತನಹಳ್ಳಿ,<br><br>ಕೊಪ್ಪ ಹೋಬಳಿ, ಮದ್ದೂರು ತಾಲ್ಲೂಕು. ಮಂಡ್ಯ ಜಿಲ್ಲೆ.</td>
</tr>
</table>

**ಸಂಖ್ಯೆ: AGRI/48/ASC/2025**

**(ಎನ್. ಚಲುವರಾಯಸ್ವಾಮಿ)**
**ಕೃಷಿ ಸಚಿವರು.**